| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|
| | | | | | | | | | | | | |

ಒಟ್ಟು ಪ್ರಶ್ನೆಗಳ ಸಂಖ್ಯೆ : 35 + 25 = 60 ]
Total No. of Questions : 35 + 25 = 60 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 16
[ Total No. of Printed Pages : 16

**ಸಂಕೇತ ಸಂಖ್ಯೆ : 33-K**
**Code No. : 33-K**

# ವಿಷಯ : ದ್ವಿತೀಯ ಭಾಷೆ — ಕನ್ನಡ
# Subject : Second Language — KANNADA

ದಿನಾಂಕ : 10. 06. 2009 ]
[ Date : 10. 06. 2009

ಸಮಯ : ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-00 ರವರೆಗೆ ]
[ Time : 10-30 A.M. to 1-00 P.M

ಪರಮಾವಧಿ ಅಂಕಗಳು : 100 ]
[ Max. Marks : 100

## FOR OFFICE USE ONLY

### PART – A

| Q. No. | Marks | Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|---|---|
| 1. | | 7. | | 13. | | 19. | | 25. | | 31. | |
| 2. | | 8. | | 14. | | 20. | | 26. | | 32. | |
| 3. | | 9. | | 15. | | 21. | | 27. | | 33. | |
| 4. | | 10. | | 16. | | 22. | | 28. | | 34. | |
| 5. | | 11. | | 17. | | 23. | | 29. | | 35. | |
| 6. | | 12. | | 18. | | 24. | | 30. | | ∞ | |

*Total Marks of Part – A*

### PART – B

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 36. | | 41. | | 46. | | 51. | | 56. | |
| 37. | | 42. | | 47. | | 52. | | 57. | |
| 38. | | 43. | | 48. | | 53. | | 58. | |
| 39. | | 44. | | 49. | | 54. | | 59. | |
| 40. | | 45. | | 50. | | 55. | | 60. | |

*Total Marks of Part – B*

| Total Marks in words | | Grand Total | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

[ Turn over

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕವು **ಎರಡು** ವಿಭಾಗಗಳನ್ನು ಹೊಂದಿದೆ. ಅವು ಎ – **ವಿಭಾಗ** ಮತ್ತು ಬಿ – **ವಿಭಾಗ.**

ii) ಎ – **ವಿಭಾಗ** 35 ಪ್ರಶ್ನೆಗಳನ್ನು ಹೊಂದಿದೆ ಮತ್ತು ಬಿ – **ವಿಭಾಗ** 25 ಪ್ರಶ್ನೆಗಳನ್ನು ಹೊಂದಿದೆ.

iii) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕದಲ್ಲೇ ಉತ್ತರಿಸಲು ಸ್ಥಳಾವಕಾಶ ಕೊಡಲಾಗಿದೆ.

iv) ಎ – **ವಿಭಾಗದಲ್ಲಿ**ರುವ ಸೂಚನೆಗಳನ್ನು ಅನುಸರಿಸಿ ಮತ್ತು ಪ್ರಶ್ನೆ ಸಹಿತ ಉತ್ತರ ಪುಸ್ತಕದಲ್ಲಿರುವ ನಾಲ್ಕು ಪರ್ಯಾಯ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿಯೇ ಪೂರ್ಣ ಉತ್ತರವನ್ನು ಬರೆಯಿರಿ.

v) ಬಿ – **ವಿಭಾಗ**ದ ಪ್ರತಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

## ಎ – ವಿಭಾಗ

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಪೂರ್ಣ ಉತ್ತರವನ್ನು ಬರೆಯಿರಿ : $35 \times 1 = 35$

1. ತಗಡೂರು ರಾಮಚಂದ್ರರಾಯರು ಕೈಗಾಡಿಯಲ್ಲಿ ಇವುಗಳನ್ನು ಮಾರುತ್ತಿದ್ದರು :

(ಎ) ಪಾತ್ರೆಗಳನ್ನು (ಬಿ) ಸ್ವದೇಶದ ಸಾಮಾನುಗಳನ್ನು

(ಸಿ) ವಿದೇಶೀ ಸಾಮಾನುಗಳನ್ನು (ಡಿ) ಒಳ್ಳೆಯ ಪುಸ್ತಕಗಳನ್ನು

*ಉತ್ತರ :* ______________________

2. ಭೂದಾನ ಚಳುವಳಿಯ ಹರಿಕಾರರು

(ಎ) ಮಹಾತ್ಮ ಗಾಂಧಿ (ಬಿ) ವಿಶ್ವೇಶ್ವರಯ್ಯನವರು

(ಸಿ) ವಿನೋಬಾ ಭಾವೆ (ಡಿ) ತಗಡೂರು ರಾಮಚಂದ್ರರಾಯರು

*ಉತ್ತರ :* ______________________

3. ಲಾಲ್‌ಬಾಗ್ ಗಾಜಿನ ಮನೆ ಯಾವ ಗಾಜಿನ ಅರಮನೆಯ ಪುನರುತ್ಥಾನವಾಗಿದೆ ?

(ಎ) ಭೂಪಾಲ್‌ನ (ಬಿ) ಅಮೆರಿಕಾದ

(ಸಿ) ಲಂಡನ್ನಿನ (ಡಿ) ದೆಹಲಿಯ

*ಉತ್ತರ :* ______________________

4. ಬೆಂಗಳೂರು ನಗರವು ಹೀಗೆಂದೂ ಹೆಸರಾಗಿದೆ :

(ಎ) ಉದ್ಯಾನ ನಗರ (ಬಿ) ನಗರಗಳ ರಾಣಿ

(ಸಿ) ಉದ್ಯಮಿಗಳ ನಗರ (ಡಿ) ಕಂಪ್ಯೂಟರ್ ನಗರ

*ಉತ್ತರ :* ______________________

5. ಈ ನೀರು ಅಂತರ್ಜಲವಾಗುತ್ತದೆ :

(ಎ) ನಿಂತ ನೀರು (ಬಿ) ನಾವು ಸುರಿದ ನೀರು

(ಸಿ) ಮಳೆ ನೀರು (ಡಿ) ಸ್ನಾನ ಮಾಡಿದ ನೀರು

*ಉತ್ತರ :* ______________________

6. ಚೆನ್ನೈನ ರೈನ್ ಸೆಂಟರ್‌ನಲ್ಲಿ ಈ ಊರಿನ ವಿಡಿಯೋ ತೋರಿಸಿದರು :

(ಎ) ರಾಳೆಗಾಮ್ಸ್‌ಸಿದ್ಧಿ (ಬಿ) ಮದ್ರಾಸ್

(ಸಿ) ಉಡುಪಿ (ಡಿ) ಬಿಜಾಪುರ

*ಉತ್ತರ :* ______________________________

7. ಮಗುವಿನ ಕರೆ ಪಾಠದ ಲೇಖಕರು

(ಎ) ಶಿವರಾಮ ಕಾರಂತರು (ಬಿ) ವಾಮನ ಬೇಂದ್ರೆ

(ಸಿ) ದ.ರಾ. ಬೇಂದ್ರೆ (ಡಿ) ಮಾಸ್ತಿ ವೆಂಕಟೇಶ ಅಯ್ಯಂಗಾರ್

*ಉತ್ತರ :* ______________________________

8. ಹುಡಿಯ ಹುಳುಗಳಿಗೆ ಗಾಂಧೀಜಿ ಎಂಥಹ ಹೃದಯವನ್ನು ಬಿತ್ತಿದರು ?

(ಎ) ಕಬ್ಬಿಣದ (ಬಿ) ವಜ್ರದ

(ಸಿ) ಬೆಳ್ಳಿಯ (ಡಿ) ಚಿನ್ನದ

*ಉತ್ತರ :* ______________________________

9. ದೇಹವೆಂಬ ಬಂಡಿಯಲ್ಲಿ ನಾ ಮೇಲು – ನೀ ಮೇಲು ಅನ್ನುತ್ತಿರುವುದು

(ಎ) ಪಂಚೇಂದ್ರಿಯಗಳು (ಬಿ) ನವದ್ವಾರಗಳು

(ಸಿ) ಜ್ಞಾನೇಂದ್ರಿಯಗಳು (ಡಿ) ತಲೆಗೂದಲುಗಳು

*ಉತ್ತರ :* ______________________________

10. ಶಾಂತಾದೇವಿ ಕೆ. ಸಾಬಾದಿಯವರ ಕಾಲ

(ಎ) 1936 (ಬಿ) 1937

(ಸಿ) 1938 (ಡಿ) 1939

*ಉತ್ತರ :* ______________________________

11. ವಿ.ಕೃ. ಗೋಕಾಕರು ಜನಿಸಿದ ಸ್ಥಳ

(ಎ) ಗುಂಡ್ಲುಪೇಟೆ (ಬಿ) ದೇವನಹಳ್ಳಿ

(ಸಿ) ಧಾರವಾಡ (ಡಿ) ಸವಣೂರು

*ಉತ್ತರ :* ______________________________

12. ಹಿರಿಯರನ್ನು ನೋಡಿದಾಗ ಕವಿಗಳಿಗೆ ಇವರ ನೆನಪಾಯಿತು :

(ಎ) ತಮ್ಮ ಗುರುಗಳ (ಬಿ) ತಮ್ಮ ಮಗನ

(ಸಿ) ತಮ್ಮ ಅಜ್ಜನ (ಡಿ) ಪಕ್ಕದ ಮನೆಯ ಹುಡುಗಿಯ

*ಉತ್ತರ :* ______

13. ಕವಿ ಹಾಗೂ ಹಿರಿಯರ ನಡುವೆ ಮಗ ಯಾವ ರೂಪ ತಾಳಿದ ?

(ಎ) ನೀರು (ಬಿ) ಗಾಳಿ

(ಸಿ) ಮೋಡ (ಡಿ) ಮಳೆ

*ಉತ್ತರ :* ______

14. ಪುರಂದರದಾಸರ ಮೊದಲ ಹೆಸರು

(ಎ) ಪುರಂದಪ್ಪ ನಾಯಕ (ಬಿ) ಶಿವಪ್ಪ ನಾಯಕ

(ಸಿ) ಶ್ರೀನಿವಾಸ ನಾಯಕ (ಡಿ) ವರದಪ್ಪ ನಾಯಕ

*ಉತ್ತರ :* ______

15. ಸಿಂಹಾಸನವೇರಿದ ಭರತನು ಕಾಣುತ್ತಿದ್ದುದು

(ಎ) ಪ್ರತಿ ಸೂರ್ಯನಂತೆ (ಬಿ) ಮೇರು ಪರ್ವತದಂತೆ

(ಸಿ) ಊರ ಜನರಂತೆ (ಡಿ) ಪ್ರತಿ ಚಂದ್ರನಂತೆ

*ಉತ್ತರ :* ______

16. 'ಓಡುಓಡು' – ಇದೊಂದು

(ಎ) ನುಡಿಗಟ್ಟು (ಬಿ) ಅನುಕರಣಾವ್ಯಯ

(ಸಿ) ದ್ವಿರುಕ್ತಿ (ಡಿ) ಜೋಡಿನುಡಿ

*ಉತ್ತರ :* ______

17. ಈ ಗಾದೆಯನ್ನು ಪೂರ್ಣಗೊಳಿಸಿ – ಗಿಡವಾಗಿ ಬಗ್ಗದ್ದು

(ಎ) ಮರವಾಗಿ ಬಗ್ಗೀತೆ ? (ಬಿ) ಮರವಾಗಿ ಬಾಡೀತೆ ?

(ಸಿ) ಮರವಾಗಿ ಮಲಗೀತೆ ? (ಡಿ) ಮರವಾಗಿ ಓಡೀತೇ ?

*ಉತ್ತರ :* ______

18. ಕ್ರಿಯಾಪದದ ಮೂಲ ರೂಪ

(ಎ) ಕ್ರಿಯಾ ವಿಶೇಷಣ (ಬಿ) ಧಾತು

(ಸಿ) ನಾಮಪದ (ಡಿ) ತದ್ಧಿತಾಂತ

*ಉತ್ತರ :* ______________________________

19. ಬ್ರಹ್ಮಾಂಡ ಇದು ಈ ಸಂಧಿಗೆ ಉದಾಹರಣೆ :

(ಎ) ಗುಣ ಸಂಧಿ (ಬಿ) ಸವರ್ಣದೀರ್ಘ ಸಂಧಿ

(ಸಿ) ಅನುನಾಸಿಕ ಸಂಧಿ (ಡಿ) ವಕಾರಾಗಮ ಸಂಧಿ

*ಉತ್ತರ :* ______________________________

20. ವಿಸ್ತಾರ ಪದದ ತದ್ಭವ ರೂಪ

(ಎ) ಬಿಸ್ತಾರ (ಬಿ) ಸುಸ್ತಾರ

(ಸಿ) ಕತ್ತರ (ಡಿ) ಬಿತ್ತರ

*ಉತ್ತರ :* ______________________________

21. ಮೈದುಂಬು ಈ ಪದವನ್ನು ಬಿಡಿಸಿ ಬರೆದರೆ ಆಗುವ ರೂಪ

(ಎ) ಮೈ + ತುಂಬು (ಬಿ) ಮೈ + ತುಂ + ಬು

(ಸಿ) ಮೈಯ್ಯ + ತುಂಬು (ಡಿ) ತುಂಬಿದ + ಮೈ

*ಉತ್ತರ :* ______________________________

22. 'ಭಾಗ್ಯರವಿ' ಇದು ಈ ಅಲಂಕಾರಕ್ಕೆ ಉದಾಹರಣೆ :

(ಎ) ಯಮಕ (ಬಿ) ಉಪಮಾ

(ಸಿ) ಉತ್ಪ್ರೇಕ್ಷೆ (ಡಿ) ರೂಪಕ

*ಉತ್ತರ :* ______________________________

23. ಆಕಾರ ಪದದ ವಿರುದ್ಧಾರ್ಥ ರೂಪ

(ಎ) ವಿಕಾರ (ಬಿ) ಸಾಕಾರ

(ಸಿ) ನಿರಾಕಾರ (ಡಿ) ಓಂಕಾರ

*ಉತ್ತರ :* ______________________________

[ Turn over

24. 'ಸತಿ' ಪದದ ಬಹುವಚನ ರೂಪ

(ಎ) ಸತಿಯರು (ಬಿ) ಸತಿಯಂದಿರು

(ಸಿ) ತುಂಬಾಸತಿ (ಡಿ) ಸತಿಗಳು

*ಉತ್ತರ :* __________

25. ಮೂಲೋಕ – ಇದು ಈ ಸಮಾಸಕ್ಕೆ ಉದಾಹರಣೆ :

(ಎ) ದ್ವಿಗು (ಬಿ) ದ್ವಂದ್ವ

(ಸಿ) ಅವ್ಯಯೀಭಾವ (ಡಿ) ಕರ್ಮಧಾರೆಯ

*ಉತ್ತರ :* __________

26. ಹಾಸ್ಯವನ್ನು ಇಲ್ಲಿರುವ ವಿಭಕ್ತಿ

(ಎ) ತೃತೀಯಾ (ಬಿ) ದ್ವಿತೀಯಾ

(ಸಿ) ಪಂಚಮೀ (ಡಿ) ಷಷ್ಠೀ

*ಉತ್ತರ :* __________

27. 'ಮೂಗ' – ಇದು ಈ ನಾಮಪದಕ್ಕೆ ಉದಾಹರಣೆ :

(ಎ) ಅನ್ವರ್ಥ (ಬಿ) ಅಂಕಿತ

(ಸಿ) ರೂಢ (ಡಿ) ಭಾವ

*ಉತ್ತರ :* __________

28. 'ಅವ್ವೆ' ಪದದ ಗ್ರಾಂಥಿಕ ರೂಪ

(ಎ) ಅವಳೆ (ಬಿ) ಅವಳು

(ಸಿ) ಅವ್ವೆ (ಡಿ) ಅಮ್ಮ

*ಉತ್ತರ :* __________

29. 'ಸಿರಿ' ಪದದ ತತ್ಸಮ ರೂಪ

(ಎ) ಶ್ರೀಮಾನ್ (ಬಿ) ಶ್ರೀ

(ಸಿ) ಸಂಪತ್ತು (ಡಿ) ಶಿರಿ

*ಉತ್ತರ :* __________

30. ಸೇವಕ ಪದದಲ್ಲಿರುವ ಲಿಂಗ

(ಎ) ಸ್ತ್ರೀಲಿಂಗ (ಬಿ) ಪುಲ್ಲಿಂಗ

(ಸಿ) ನಪುಂಸಕ ಲಿಂಗ (ಡಿ) ನಿತ್ಯನಪುಂಸಕ ಲಿಂಗ

*ಉತ್ತರ :* ______________________

31. 'ತಿನ್ನು' ಕ್ರಿಯಾಪದದ ನಿಷೇಧ ರೂಪ

(ಎ) ತಿಂದನು (ಬಿ) ತಿನ್ನುವನು

(ಸಿ) ತಿಂದಿತು (ಡಿ) ತಿನ್ನನು

*ಉತ್ತರ :* ______________________

32. 'ಸೆಳೆ' ಪದದ ಅರ್ಥ

(ಎ) ಆಕರ್ಷಣೆ (ಬಿ) ಮಳೆ

(ಸಿ) ಮಿಂಚು (ಡಿ) ಸುಳಿ

*ಉತ್ತರ :* ______________________

33. ಇವುಗಳಲ್ಲಿ ಸವರ್ಣದೀರ್ಘ ಸಂಧಿಗೆ ಉದಾಹರಣೆ

(ಎ) ಪರ್ವತವನ್ನು (ಬಿ) ಹಿಮಾಲಯ

(ಸಿ) ಪ್ರಶ್ನೋತ್ತರ (ಡಿ) ಮಳೆಗಾಲ

*ಉತ್ತರ :* ______________________

34. ಈ ಪದಗಳಲ್ಲಿರುವ ಅನ್ಯದೇಶೀಯ ಪದ

(ಎ) ಟೂರ್ (ಬಿ) ಗೋಕುಂಟ

(ಸಿ) ಜಲಮಟ್ಟ (ಡಿ) ಇಂಗು ಕೊಳ

*ಉತ್ತರ :* ______________________

35. ಕನ್ನಡ ವರ್ಣಮಾಲೆಯಲ್ಲಿರುವ ಹ್ರಸ್ವ ಮತ್ತು ದೀರ್ಘಸ್ವರಗಳ ಸಂಖ್ಯೆ

(ಎ) 16 (ಬಿ) 13

(ಸಿ) 14 (ಡಿ) 15

*ಉತ್ತರ :* ______________________

## ಬಿ – ವಿಭಾಗ

ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 × 2 = 20

36. ರಾಮಕೃಷ್ಣನು ತನ್ನ ಹೆಂಡತಿಯ ಕಿವಿಯಲ್ಲಿ ಹೇಳಿದ ಉಪಾಯ ಯಾವುದು ?

37. ‘ಲಠ್ಠಣಿಗೆ ಅಂತ ಯಾಕ ಕರೀತಾರೆ’ ಎಂದು ಕೇಳಿದ ಪ್ರಶ್ನೆಗೆ ಅಜ್ಜಿ ಹೇಳಿದ ಉತ್ತರವೇನು ?

38. ಆಧುನಿಕ ಹವ್ಯಾಸಿ ರಂಗಭೂಮಿಗೆ ಕಾರಂತರು ಭದ್ರ ಬುನಾದಿಯನ್ನು ಹೇಗೆ ನಿರ್ಮಾಣ ಮಾಡಿದರು ?

39. ರಾಮಚಂದ್ರರಾಯರನ್ನು ‘ಪರಿಪೂರ್ಣ ವಿದ್ಯಾವಂತರು’ ಎಂದು ಏಕೆ ಕರೆಯುತ್ತಾರೆ ?

40. ಲೇಖಕರು 'ವೃಕ್ಷ ಪ್ರೇಮಿ'ಯ ಆಗಮನವನ್ನು ಕುರಿತು ಹೇಳಿರುವ ಮಾತುಗಳೇನು ?

41. ಮಳೆ ಕೊಯ್ಲಿನ ಉಪಯೋಗವನ್ನು ಯಾರ್ಯಾರು ಹೇಗೆ ಪಡೆದಿದ್ದಾರೆ ಎಂದು ಶೇಖರ ಹೇಳಿದ ?

42. ಕವಿ ಗಾಂಧೀಜಿಯವರನ್ನು ಪವಾಡ ಪುರುಷರೆಂದು ಕರೆಯಲು ಕಾರಣವೇನು ?

43. ತವರೂರಿಗೆ ಯಾವ ದಾರಿಯಲ್ಲಿ ಹೋಗುವಂತೆ ಬಾಲೆ ಬಳೆಗಾರನಿಗೆ ತಿಳಿಸಿದಳು ?

44. ವಚನಕಾರರ ಪ್ರಕಾರ ದನದ ಸ್ವರೂಪ ಹೇಗಿತ್ತು ? ತಿಳಿಸಿ.

45. ದಾಸರು ಮನುಷ್ಯರಿಗೆ ಏನೆಂದು ಎಚ್ಚರಿಕೆ ನೀಡುತ್ತಾರೆ ?

ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿ : $8 \times 2 = 16$

46. 'ಉಪಾಯವಿಲ್ದೆ ಇದ್ರೆ ಅಪಾಯವೇ'

47. ''ಅಯ್ಯ ನಮ್ಮವ್ವ, ಏನ್ ಲಕ್ಷ್ಣ ಇದಾಳ ಈಕೆ !''

48. ''ಮಳೆ ಒಂದು ಖಾಲಿ ಚೆಕ್ಕಿನ ಹಾಗೆ''

49. ಬಾ ತಾಯಿ, ಬಿಸಿಲಲ್ಲಿ ಹೋಗಿದ್ದಿ.

50. ಅವ್ವೆ ಕಣೋ ನನ್ನ ಹಡೆದವ್ವ.

51. ಯಂತ್ರಯುಗದ ಈ ಭ್ರಮೆಯಲ್ಲಿ ! ಅಂದವಿದೆ – ಚಂದವಿದೆ ಸಹ !

52. ನರಲೋಕಕೊಬ್ಬನೆ ರಾಯ.

53. ಕೋಣೆಯನು ಮನೆಯೆಂದೆ ತಿಳಿದು ಬನ್ನಿ.

54. ಕೆಳಗಿನವುಗಳಲ್ಲಿನ ಯಾವುದಾದರೂ **ಒಂದು** ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ : 1 × 3 = 3

— ಮನಸಿದ್ದರೆ ಮಾರ್ಗ

— ಬೆಳೆಯುವ ಪೈರು ಮೊಳಕೆಯಲ್ಲಿ

— ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ ?

55. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 4 = 4

ಕಣ್ಣು ________________________________________

________________________________________

________________________________________

________________________________________ ಖೋಡಿ.

ಅಥವಾ

ಸುಳಿ ಮಿಂಚಿನ ________________________________________

________________________________________

________________________________________

________________________________________ ಕೆರೆ.

ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

— ಚಿನ್ನದ ಕೋಲನ್ನು ಬಳಸಿ ರಾಜಕುಮಾರನು ತನ್ನ ತಾಯಿಯನ್ನು ಎಲ್ಲೆಲ್ಲಿ ಹುಡುಕಿದನು ?

— ರಾಮಬಾಡ ಪ್ರದೇಶದ ಕಿರುದಾರಿಯನ್ನು 'ಮಿನಿ ವಿಶ್ವ'ವೆಂದು ಕರೆದುದು ಏಕೆ ? ವಿವರಿಸಿ.

— ಬಾವಿಯ ಬಳಿ ಸೊಸೆ ಸಾವಿಗೆ ಸಿದ್ಧಳಾದ ಬಗೆ ಹೇಗೆ ?

56.

57.

58. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದಕ್ಕೆ** ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಬೇವಿನಹಳ್ಳ ತುಳುಕಾಡುತ್ತಿದೆ ಎಂದು ಕವಿ ಏಕೆ ಹೇಳುತ್ತಾನೆ ?

— ಭರತೇಶನು ಸಭೆಯಲ್ಲಿ ಠೀವಿಯಿಂದ ಮೆರೆದ ಪರಿಯನ್ನು ವರ್ಣಿಸಿ.

59. ನೀವು ಸರ್ಕಾರಿ ಪ್ರೌಢಶಾಲೆ, ಶಿವಮೊಗ್ಗ, ಹತ್ತನೆಯ ತರಗತಿ ವಿದ್ಯಾರ್ಥಿ ಎಂದು ಭಾವಿಸಿ ಅನಾರೋಗ್ಯದ ಕಾರಣ ನೀಡಿ ಒಂದು ವಾರದ ರಜೆ ಕೋರಿ ನಿಮ್ಮ ಮುಖ್ಯೋಪಾಧ್ಯಾಯರಿಗೆ ರಜೆ ಪತ್ರವನ್ನು ಬರೆಯಿರಿ.

ಅಥವಾ

ಮಾದರಿ ಪ್ರಶ್ನೆಕೋಠಿಯೊಂದನ್ನು ಕಳುಹಿಸಿ ಕೊಡುವಂತೆ ಕೋರಿ ವ್ಯವಸ್ಥಾಪಕರು 'ಜ್ಯೋತ್ಸ್ನಾ ಅಧ್ಯಯನ ಕೇಂದ್ರ'. ಬೆಂಗಳೂರು ಇವರಿಗೊಂದು ಪತ್ರ ಬರೆಯಿರಿ. $1 \times 5 = 5$

60. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ :1 × 5 = 5

— ಸುದ್ದಿ ಮಾಧ್ಯಮಗಳು – ವೃತ್ತಪತ್ರಿಕೆ

— ಜನಸಂಖ್ಯಾ ಸ್ಫೋಟ – ಕಾರಣಗಳು

— ಗ್ರಂಥಾಲಯ